ಸದನದಲ್ಲಿ ಉತ್ತರಿಸುವ ಪ್ರಶ್ನೆಗಳ ಪಟ್ಟಿ

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಶುಕ್ರವಾರ, ದಿನಾಂಕ 19ನೇ ಜುಲೈ, 2019

ಐಟಿ ಪಾರ್ಕ್ ಉಪವಿಜ್ಞಾನ ಕೇಂದ್ರ ಮತ್ತು ತಾರಾಲಯಗಳ ಪ್ರಗತಿ ಕುರಿತು

ಶ್ರೀ ಎಸ್.ಆರ್. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) -

61 (413) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ಈ ಹಿಂದೆ ಆಯವ್ಯಯದಲ್ಲಿ ಮಂಜೂರಾತಿಯಾದ ಬಾಗಕಲಕೋಟೆ, ವಿಜಯಪುರ ಹಾಗೂ ಬೀದರ್ ಜಿಲ್ಲೆಯಲ್ಲಿನ ಐಟಿ ಪಾರ್ಕ್‌ಗಳ ಪ್ರಗತಿ ಯಾವ ಹಂತದಲ್ಲಿದೆ ; ನಿರೀಕ್ಷಿತ ಪ್ರಗತಿಯಾಗದಿದ್ದಲ್ಲಿ ಕಾರಣವೇನು ;

(ಆ) ಈ ಹಿಂದೆ ಆಯವ್ಯಯದಲ್ಲಿ ಮಂಜೂರಾತಿಯಾದ ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಯಲ್ಲಿನ ಉಪ ವಿಜ್ಞಾನ ಕೇಂದ್ರಗಳ ಪ್ರಗತಿ ಯಾವ ಹಂತದಲ್ಲಿದೆ ; ನಿರೀಕ್ಷಿತ ಪ್ರಗತಿಯಾಗದಿದ್ದಲ್ಲಿ ಕಾರಣವೇನು ; (ಪೂರ್ಣ ವಿವರ ನೀಡುವುದು)

(ಇ) ಬಾಗಲಕೋಟೆಯಲ್ಲಿ ತಾರಾಲಯ (ಪ್ಲಾನಿಟೋರಿಯಂ) ನಿರ್ಮಿಸುವ ಕಾರ್ಯ ಯಾವ ಹಂತದಲ್ಲಿದೆ ;

(ಈ) ಇದರ ನಿರ್ಮಾಣ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು ?